ಬೆಳಕು ಯೋಜನೆಯಡಿಯಲ್ಲಿ ಸಿ.ಎಫ್.ಎಲ್. ಬಲ್ಬುಗಳನ್ನು ವಿತರಿಸಲು ಉದ್ದೇಶಿಸಿದ್ದು, ಹಳ್ಳಿಗಳ ವಿವರದ ಲಭ್ಯತೆಯ ನಂತರ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು.

ಬೀದರ್ ಜಿಲ್ಲೆಯ ವಿವಿಧ ಗ್ರಾಮಗಳಲ್ಲಿ ಅಸಂಪ್ರದಾಯಿಕ ಇಂಧನ ಮೂಲಗಳಲ್ಲಿ ಒಂದಾದ ಪವನ ವಿದ್ಯುತ್ ಯೋಜನೆಯಿಂದ ವಿದ್ಯುತ್ ಉತ್ಪಾದನೆ ಮಾಡಲು ಖಾಸಗಿ ಸಂಸ್ಥೆಯಾದ ಮೆ " ಲ್ಯಾಂಕೋ ವಿಂಡ್ ಪವರ್ ಪ್ರೈ.ಲಿ. ಕಂಪನಿಗೆ 64.50 ಮೆ.ವ್ಯಾ. ಸಾಮರ್ಥ್ಯದ ಯೋಜನೆಯನ್ನು ಹಂಚಿಕೆ ಮಾಡಲಾಗಿದೆ.

ಸೌರ ವಿದ್ಯುತ್ ನೀತಿ ಪ್ರಕಾರ ಸರ್ಕಾರದ ವತಿಯಿಂದ 10 ಯೋಜನೆಗಳಿಗೆ ಒಟ್ಟು 80 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಎಲ್.ಓ.ಎ. ನೀಡಲಾಗಿದೆ. ಸದರಿ ಅಭಿವೃದ್ಧಿದಾರರಿಗೆ ಬೀದರ್ ಜಿಲ್ಲೆಯಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲು ಅನುಕೂಲಕರವಾದ ಸೌರ ಪ್ರಸರಣವಿರುವುದಾಗಿ ತಿಳಿಸಲಾಗಿದ್ದು, ಇನ್ನೂ ಯಾವುದೇ ಅಭಿವೃದ್ಧಿದಾರರು ಸ್ಥಳವನ್ನು ನಿಗದಿ ಪಡಿಸಿಕೊಂಡಿರುವುದಿಲ್ಲ.

ಸಂಖ್ಯೆ : ಇಎನ್ 120 ಪಿಪಿಎಂ 2012

(ಶೋಭಾ ಕರಂದ್ಲಾಜೆ)
ಇಂಧನ ಸಚಿವರು

ಕರ್ನಾಟಕ ವಿಧಾನ ಸಭೆ

287

ಶ್ರೀ ಅಮರೇಶ್ (ಮುಳಬಾಗಿಲು)

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಿಂದ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು (ಪೂರ್ಣ ಮಾಹಿತಿ ನೀಡುವುದು

ಇಂಧನ ಸಚಿವರು

ಅ) ರಾಜ್ಯದಲ್ಲಿ ವಿದ್ಯುತ್ ಸರಬರಾಜು ಕಂಪನಿಗಳು ಸ್ವಲ್ಪ ಮಟ್ಟಿನ ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೊರತೆ ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಕೊರತೆಯನ್ನು ನೀಗಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

1 ವಿವಿಧ ಕಾರಣಗಳಿಂದ ವಿಫಲಗೊಳ್ಳುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಶೀರ್ಘಗತಿಯಲ್ಲಿ ಬದಲಾಯಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅಲ್ಲದೇ, ವಿಫಲವಾಗುವ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಶೀಘ್ರಗತಿಯಲ್ಲಿ ದುರಸ್ಥಿಗೊಳಿಸಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ಲಭ್ಯತೆಯನ್ನು ಹೆಚ್ಚಿಸಲು ರಾಜ್ಯಾದ್ಯಾಂತ ಒಟ್ಟು 67 ಟ್ರಾನ್ಸ್‌ಫಾರ್ಮರ್ ದುರಸ್ಥಿ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಪ್ರಸಕ್ತ ಸಾಲಿನಲ್ಲಿ (2012–13) ಜೂನ್ 2012ರ ಅಂತ್ಯದವರೆಗೆ ಈ ಟ್ರಾನ್ಸ್‌ಫಾರ್ಮರ್ ದುರಸ್ಥಿ ಕೇಂದ್ರಗಳಿಂದ ಒಟ್ಟು 14,018 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ದುರಸ್ಥಿಗೊಳಿಸಲಾಗಿರುತ್ತದೆ.

2 ದುರಸ್ಥಿಗೊಂಡ ಪರಿವರ್ತಕಗಳ ಗುಣಮಟ್ಟವನ್ನು ಕಾಪಾಡಲು ದುರಸ್ಥಿಯ ಪ್ರತಿ ಹಂತದಲ್ಲಿ ಪರೀಕ್ಷಿಸಲು ಕ್ರಮ ಕೈಗೊಳ್ಳಲಾಗಿದೆ. ಶೀಘ್ರವಾಗಿ ಪರಿವರ್ತಕಗಳನ್ನು ದುರಸ್ಥಿ ಮಾಡಿ ಅವುಗಳನ್ನು ಶೀಘ್ರವಾಗಿ ಬದಲಾಯಿಸುವ ಸಂಬಂಧ ವಿಭಾಗೀಯ ಮಟ್ಟದಲ್ಲಿ ದುರಸ್ಥಿಗೆ ಅವಾರ್ಡ್ ಮಾಡಲು ಕ್ರಮ ಕೈಗೊಳ್ಳಲಾಗಿದೆ.

3 ಪರಿವರ್ತಕಗಳ ಕೊರತೆಯನ್ನು ನೀಗಿಸಲು ಖರೀದಿಯನ್ನು ಚುರುಕುಗೊಳಿಸಲಾಗಿದ್ದು, ಏಪ್ರಿಲ್ 2012 ರಿಂದ ಜೂನ್ 2012ರ ಅಂತ್ಯದವರೆಗೆ ಒಟ್ಟು 3,081 ಪರಿವರ್ತಕಗಳನ್ನು ಖರೀದಿಸಲಾಗಿದೆ.

4 ಅಕ್ರಮ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಿ ಅವುಗಳಿಗೆ ಮೂಲಭೂತ ಸೌಕರ್ಯ ನೀಡಿ ಈ ಯೋಜನೆಯಡಿ 3 ರಿಂದ 5 ಪಂಪುಸೆಟ್ಟುಗಳಿಗೆ ಒಂದು 25 ಕೆ.ವಿ.ಯ ಪರಿವರ್ತಕವನ್ನು ಸ್ಥಾಪಿಸಿ ಪರಿವರ್ತಕದ ವಿಫಲತೆಯನ್ನು ನೀಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5 ರಾಜ್ಯದ ಗ್ರಾಮಾಂತರ ಪ್ರದೇಶಗಳಲ್ಲಿ "ನಿರಂತರ ಜ್ಯೋತಿ" ಎಂಬ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದ್ದು, ಈ ಯೋಜನೆಯಡಿ

ಕೃಷಿ ಮತ್ತು ಕೃಷಿಯೇತರ ಸ್ಥಾವರಗಳಿಗೆ ಪ್ರತ್ಯೇಕ ಫೀಡರ್‌ಗಳನ್ನು ಹಾಗೂ ಹೆಚ್ಚುವರಿ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಅಳವಡಿಸುವುದರಿಂದ, ಗ್ರಾಮಾಂತರ ಪ್ರದೇಶಗಳಲ್ಲಿ ಹಾಲಿ ಇರುವ ಫೀಡರ್‌ಗಳಲ್ಲಿನ ವಿದ್ಯುತ್ ಹೊರೆಯು ಕಡಿಮೆಗೊಳ್ಳುತ್ತದೆ. ಇದರಿಂದ, ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ವಿಫಲತೆಯು ಕಡಿಮೆಗೊಂಡು, ಕೊರತೆಯನ್ನು ನೀಗಿಸಬಹುದಾಗಿದೆ. ಅಲ್ಲದೇ, ಈ ಯೋಜನೆಯಿಂದ ಕೆಪಾಸಿಟರ್ ಮೂಲಕ ನೀರಾವತಿ ಪಂಪುಸೆಟ್ಟುಗಳನ್ನು ಚಾಲನೆಗೊಳಿಸುವುದನ್ನು ತಡೆಗಟ್ಟಬಹುದಾಗಿದೆ.

6 ತಾಂತ್ರಿಕ ದೋಷಗಳಿಂದ ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ವಿಫಲವಾಗುವುದನ್ನು ಕಡಿಮೆ ಮಾಡಲು ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳಲ್ಲಿ ಹಾಗೂ ವಿದ್ಯುತ್ ಮಾರ್ಗಗಳಲ್ಲಿ ಅವಶ್ಯವಿರುವ ಎಲ್ಲಾ ನಿರ್ವಹಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಸಂಖ್ಯೆ : ಇಎನ್ 119 ಪಿಪಿಎಂ 2012

(ಶೋಭಾ ಕರಂದ್ಲಾಜೆ)
ಇಂಧನ ಸಚಿವರು

ಗಂಗಾ ಕಲ್ಯಾಣ ಯೋಜನೆಗಾಗಿ ನಿಗಧಿ ಪಡಿಸಿದ ಜಮೀನು
735

ಶ್ರೀ ರುದ್ರೇಶ್ ಗೌಡ ವೈ.ಎನ್. (ಬೇಲೂರು)

ಅ) ಡಾ: ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಗಾಗಿ ನಿಗದಿ ಪಡಿಸಿದ ಕನಿಷ್ಟ ಜಮೀನು ಎಷ್ಟು?

ಆ) ಬೇಲೂರು ತಾಲ್ಲೂಕಿನ ಮಲೆನಾಡು, ಭಾಗಗಳಲ್ಲಿ ಪರಿಶಿಷ್ಟ ಜಾತಿಯವರು ಹೆಚ್ಚಾಗಿ ವಾಸವಿದ್ದು, ಇವರುಗಳಿಗೆ ಕನಿಷ್ಟ 1 ಎಕರೆ ಜಮೀನು ಇದ್ದು, ಇವರಿಗೆ ಗಂಗಾ ಕಲ್ಯಾಣ ಯೋಜನೆಯಿಂದ ಪ್ರಯೋಜನ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸರ್ಕಾರ ಕನಿಷ್ಟ ಜಮೀನು ಮಿತಿಯನ್ನು 1 ಎಕರೆಗೆ ನಿಗದಿ ಪಡಿಸಲು ಏನು ಕ್ರಮಕೈಗೊಂಡಿದೆ?